ತಪ್ಪಿರಬಹುದಾದರೂ ತನ್ನ ಉದ್ದೇಶ ತಪ್ಪಾಗಿರಲಿಲ್ಲ. ತನಗೆ ತನ್ನದೇ ಆದ ಆಸೆ, ಆಕಾಂಕ್ಷೆಗಳು, ಕೈ ಹಿಡಿದವನಿಂದ ಹೆಣ್ಣೊಬ್ಬಳು ನಿರೀಕ್ಷಿಸುವಂತಹವು ಇರಬಾರದೇ?

ಪ್ರಭಾವತಿ ಎಲ್ಲಾ ಮರೆತು ಜೀವನ್ಮುಖಿಯಾಗಲು ಮಗ ಕೂಡಾ ಕಾರಣನಾಗಿದ್ದ. ಬೆಳೆಯುತ್ತಾ ಬಂದಂತೆ ಹುಡುಗನಿಗೆ 'ಅಪ್ಪ ಮಾಡಿದ್ದು ದೊಡ್ಡ ಅಪರಾಧ' ಎನ್ನಿಸತೊಡಗಿ ಅಪ್ಪನ ಹೆಸರೆತ್ತಿದರೆ ಸಿಟ್ಟು ಬರುತ್ತಿತ್ತು. 'ಸಾಯ್ಲಿ ಅತ್ಲಾಗೆ. ಅವನನ್ನು ಮರೆತುಬಿಡು' ಅನ್ನುತ್ತಿದ್ದ ರಾಮಕೃಷ್ಣ. ಮದುವೆಯ ಹೊತ್ತಿಗೆ ತನ್ನ ಹೆಂಡತಿಗೆ ಅವನು ಹಾಕಿದ್ದ ಶರತ್ತು ಒಂದೇ, 'ಅಮ್ಮನನ್ನು ಚೆನ್ನಾಗಿ ನೋಡ್ಕೋಬೇಕು. ಯಾವ ಕಾರಣಕ್ಕೂ ಅವಳ ಮನಸ್ಸು ನೋಯಿಸೋ ಕೆಲಸ ಈ ಮನೇಲಿ ನಡೀಬಾರದು. ಅಪ್ಪ, ಅಮ್ಮ ಎರಡೂ ಆಗಿ ಸಾಕಿದವಳ ಋಣ ನನ್ನ ಹೆಗಲು ಮುರಿಯೋವಷ್ಟಿದೆ'. ಸುಗುಣನಿಗೆ ಇದೊಂದು ದೊಡ್ಡ ವಿಷಯ ಅನಿಸಿರಲಿಲ್ಲ. ಅಮ್ಮ ತನ್ನ ಒಬ್ಬಂಟಿತನದ ಕೋಟೆಯಲ್ಲಿ ಕಳೆದು ಹೋಗದಂತೆ ರಾಮಕೃಷ್ಣ ಎಷ್ಟು ಮುತುವರ್ಜಿ ವಹಿಸುತ್ತಿದ್ದ ಅಂದರೆ ಅವಳನ್ನು ಮನೆಯಲ್ಲಿರಲು ಬಿಡದೆ ಸಾಧ್ಯವಾದ ಕಡೆಗೆಲ್ಲಾ ಜೊತೆಗೆ ಕರೆದೊಯ್ಯುತ್ತಿದ್ದ. ಗಂಡ ಇದ್ದಾಗ ದೊರಕದಿದ್ದ ಸೌಭಾಗ್ಯಗಳು ಮಗ ದೊಡ್ಡವನಾಗುತ್ತಿದ್ದಂತೆ ಪ್ರಭಾವತಿಯ ಕಾಲಡಿಗೆ ಬಂದು ಬಿದ್ದಿದ್ದವು. ಸಿನಿಮಾ, ನಾಟಕ, ಜಾತ್ರೆ, ತೇರು, ಆಪ್ತೇಷ್ಟರ ಮನೆಯ ಮದುವೆಮುಂಜಿ ಎಲ್ಲಕ್ಕೂ ಅವನಿಗೆ ಅಮ್ಮ ಜೊತೆ. ಶೀನಿ ಮಾವ ಯಾವಾಗಿನಂತೆ ಬಂದು ಹೋಗಿ ಮಾಡುತ್ತಿದ್ದ. ಅವಳು ಸಹಜ ಸ್ಥಿತಿಗೆ ಮರಳುವಂತಾಗಲು ಶಕ್ತಿ ಮೀರಿ ಪ್ರಯತ್ನಿಸಿದ್ದ. ಪ್ರಭಾವತಿಯ ಮದುವೆಯಲ್ಲಿ ತನ್ನ ಪಾಲೂ ಇತ್ತು ಎನ್ನುವುದು ಅವನಿಗಿದ್ದ ಪಶ್ಚಾತ್ತಾಪ. ಉಳಿದ ವಿಷಯಗಳು ಅವನ ಅರಿವಿಗೆ, ಅವನ ಸ್ವಭಾವಕ್ಕೆ ನಿಲುಕುವಂತಹದ್ದಾಗಿರಲಿಲ್ಲ. ಹಾಗೊಂದು ಸಂದೇಹ ಕೂಡಾ ಅವನಿಗಿರಲಿಲ್ಲ.

★★★

ಒಂದಷ್ಟು ವರ್ಷಗಳು ಅವಜ್ಞೆಗೊಳಗಾಗಿದ್ದ ಮದರಂಗಿಯ ಚಿತ್ರ ಪ್ರಭಾವತಿಯ ತಲೆಗೂದಲು ಒಂದೊಂದಾಗಿ ಬಿಳುಪು ತಿರುಗುತ್ತಿದ್ದಂತೆ, ಕನ್ನಡಿ ಅದನ್ನು ಮನದಟ್ಟು ಮಾಡುತ್ತಿದ್ದಂತೆ, ಮತ್ತೆ ಮುನ್ನೆಲೆಗೆ ಬಂದು ನಿಂತಿತ್ತು. ತಣ್ಣತಣ್ಣಗೆ ತಲೆಗೆ ಮೆತ್ತಿಕೊಳ್ಳುತ್ತಾ, ಕಾಲಪ್ರವಾಹದಲ್ಲಿ ಹಿಂದಕ್ಕೊಯ್ಯುತ್ತಾ, ಆ ಸಂದರ್ಭವನ್ನು ನೆನಪಿನ ಮೇಲ್ಪದರಕ್ಕೆ ತಂದು ನಿಲ್ಲಿಸುತ್ತಿತ್ತು. ತನಗೆ ಅಂದುಕೊಂಡಷ್ಟು ದುಃಖವಾಗುತ್ತಿಲ್ಲವೆಂಬುದು ಅವಳಿಗೆ ಅಚ್ಚರಿ ಹುಟ್ಟಿಸುತ್ತಿತ್ತು...

ಪ್ರಭಾವತಿಯ ಮುಂದೆ ಸರಿದು ಬಂದ ಗುಲಾಬಿ ಬಾಂಡ್ಲಿಯಲ್ಲಿ ಉಳಿದಿದ್ದ ಲೇಪನವನ್ನು ಕೀಸಿ ಕೀಸಿ ಅವಳ ಮುಂದಲೆಗೆ ಮತ್ತೊಮ್ಮೆ ಬಳಿಯುತ್ತಾ, "ಆಯ್ತು ಅಮ್ಮಾ, ನನ್ನ ಕೈ ನೋಡಿ..." ಎನ್ನುತ್ತಾ ಕೆಂಪಗೆ ತಿರುಗಿದ್ದ ತನ್ನ ಎರಡೂ ಹಸ್ತಗಳನ್ನು ಅವಳ ಕಣ್ಣೆದುರು ಬೀಸಣಿಗೆಯಂತೆ ಬಿಡಿಸಿ ತೋರಿಸಿದಾಗ ವಾಸ್ತವಕ್ಕೆ ಇಳಿದು ಬಂತು ಪ್ರಭಾವತಿಯ ಚಿತ್ತ. ಮದರಂಗಿ ಹಚ್ಚಿಸಿಕೊಳ್ಳುವಾಗಲೆಲ್ಲಾ ಯಾವತ್ತೂ ಹೀಗೇ. ನೆನಪುಗಳ ಮೆರವಣಿಗೆ. ಸಾವಿಲ್ಲ ನೆನಪುಗಳಿಗೆ...

**ವಸುಮತಿ ಉಡುಪ**

ಹೊಸನಗರ ತಾಲ್ಲೂಕಿನ ನಗರ ಹುಟ್ಟೂರು. ಮೈಸೂರಿನಲ್ಲಿ ವಾಸ. 'ಪರಿವರ್ತನೆ', 'ಸಂಬಂಧಗಳು', 'ಅನವರತ', 'ಅವ್ಯಕ್ತ', 'ಮನ್ವಂತರ' ಸೇರಿದಂತೆ 11 ಕಾದಂಬರಿಗಳನ್ನು, 'ಬಂದನಾ ಹುಲಿರಾಯನು', 'ವಿಕಲ್ಪ', 'ಶೇಷ ಪ್ರಶ್ನೆ' ಸೇರಿದಂತೆ 21 ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಐದು ಪ್ರಬಂಧ ಸಂಕಲನಗಳು ಪ್ರಕಟವಾಗಿವೆ. ಸಮಗ್ರ ಕತೆಗಳ ಸಂಕಲನ 'ಕಥಾವಸಂತ' ಮೂರು ಭಾಗಗಳಲ್ಲಿ ಪ್ರಕಟಗೊಂಡಿದೆ.